ನಿಂಗಪ್ಪ ಮುದೇನೂರು ಬಳ್ಳಾರಿಯ ಹೂವಿನ ಹಡಗಲಿ ತಾಲ್ಲೂಕಿನ ಮುದೇನೂರು ಗ್ರಾಮದವರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರು. 'ಮಗುವಿನ ಧ್ಯಾನದಲ್ಲಿ', 'ಮಣ್ಣಿನ ಕವಿತೆ', 'ಕಡಲ ಕವಿತೆ', 'ನನ್ನ ಗಾಂಧಿ' ಅವರ ಕವನ ಸಂಕಲನಗಳು. ಕುವೆಂಪು ಅವರ 'ಶೂದ್ರ ತಪಸ್ವಿ', 'ಜಾಗತೀಕರಣ ಮತ್ತು ಗಾಂಧಿ', 'ಸಂಸ್ಕೃತಿ ದರ್ಶನ', 'ಅಕ್ಷರ ಮತ್ತು ಅರಿವು' ಅವರ ವಿಮರ್ಶಾ ಕೃತಿಗಳು.

ನಡೆಯಬಲ್ಲವರಾಗಿದ್ದೆವು. ಆಗ ಅಂತಹ ವಯಸ್ಸು ತಾಕತ್ತು ನಮಗಿತ್ತು. ಜಾತ್ರೆಗೆ ಹೋಗಲಿ, ಸಿನಿಮಾಕ್ಕೆ ಹೋಗಲಿ, ಶನಿವಾರದ ಸಂತೆ, ಹಡಗಲಿ ಉರುಸಿಗೆ ಹೋಗಲಿ ಹಾಗೇ ಮೂವತ್ತು ನಲವತ್ತು ಕಿಲೋಮೀಟರ್ ದೂರವಿರುವ ಮನೆದೇವ್ರು ಮೈಲಾರಕ್ಕೆ ಹೋಗಲಿ ನಡೆದೇ ಹೋಗುತ್ತಿದ್ದೆವಲ್ಲ ಶಿವನೇ.

ಈಗಿನಂತೆ ಯಾವ ಸುಖ ಸೌಕರ್ಯಗಳು ಅಷ್ಟಾಗಿರದ ಕಾಲದಲ್ಲಿ ನಡೆದ ಪಾಡು ನಮ್ಮದು. ಅದೇ 'ನಡೆದಷ್ಟು ನಾಡು ಪಡೆದಷ್ಟು ಭಾಗ್ಯ' ಅನ್ನುತ್ತಾರಲ್ಲ ಹಾಗೆ ನಮ್ಮ ಬಹುತೇಕ ಬಾಲ್ಯವಂತೂ ಸಂತರ ರೀತಿಯಲ್ಲಿಯೇ ಕಳೆದಿತ್ತು. ಎಂತಹ ಸಂದರ್ಭಗಳಲ್ಲೂ ಎದೆಗುಂದದ ಬಾಲ್ಯವನ್ನು ಆ ಹತ್ತು ಗಂಟೆಯ ಬಸ್ಸಿನ ಡ್ರೈವರ್ ಕಂಡಕ್ಟರ್ ನಮಗೆ ತುಂಬಿದ್ದರು. ನಮ್ಮ ಮನೆಯ ಸದಸ್ಯರೆಂಬಂತೆ ಊರಿನವರಿಗೆಲ್ಲ ಅವರು ಹತ್ತಿರವಾಗಿದ್ದರು. ನಮ್ಮ ಬಳಿ ಟಿಕೆಟ್ ಇತ್ತೋ ಇಲ್ಲವೋ ನನಗಂತೂ ನೆನಪಿಲ್ಲ. ಒಂದೂವರೆ ರುಪಾಯಿನೋ, ಯಡ್ರೂಪಾಯಿನೋ ಇದ್ದಾಗಲೂ ನಾವು ನಾಲ್ಕಾಣೆ ಎಂಟಾಣೆ ಕೊಟ್ಟು ಹಡಗಲಿ ಪಟ್ಟಣ ಸುತ್ತಾಡಿ, ದೊಡ್ಡವರ ಪಂಜೆ ಹಿಂದೆ ಚಾಟಿನಲ್ಲಿ ನುಸುಳಿ 'ಶಂಕರ್ ತಟ್ಟಿ ಟಾಕೀಸ್'ನಲ್ಲಿ ಸಿನಿಮಾ ನೋಡಿ ಬಂದ ಮಕ್ಕಳು ನಾವು. ಆಗ ಬಾಲಕರಾದ ನಮಗೆ ಆ ದೃಶ್ಯವೇ ಒಂದು ರೀತಿಯ ಅಚ್ಚರಿ. ಬಾಲ್ಕನಿ ಇದ್ದರೂ ಬಡತನದ ಕಾರಣಕ್ಕೆ ನಮಗದು ಅಸ್ಪೃಶ್ಯವೇ. ತಟ್ಟಿ ಸಿನಿಮಾದೊಳಗೊಂದು ಬಾಲ್ಕನಿ!? ಎಂದಿಗೂ ನಮಗದು ಆಗುಬರಲಿಲ್ಲ. ಗಾಂಧಿ ಕ್ಲಾಸಿನ ಸಿನಿಮಾ ಪರದೆ ಮುಂದೆಯೇ ಉಸುಕಿನಲ್ಲಿ ಕುಳಿತು ಆಟವಾಡುತ್ತಾ ಸಿನಿಮಾ ನೋಡುವುದೆಂದರೆ ಅದೊಂದು ರೀತಿಯ ಥ್ರಿಲ್ ಜಗತ್ತೇ.

ಇದೇ ದೊಡ್ಡ ಸಿನಿಮಾ ಪರದೆಯ ಮುಂದೆ ಕುಳಿತು ಹೀರೋ, ಹೀರೋಯಿನ್, ವಿಲನ್, ಹಾಸ್ಯ, ನೃತ್ಯ, ಫೈಟಿಂಗ್, ಪ್ರಾಣಿ ಪಕ್ಷಿ ಎಲ್ಲವನ್ನೂ ಕಣ್ತುಂಬಿಕೊಳ್ಳುವುದೇ ನಮಗಾಗ ಹಿಗ್ಗು. ಹೀಗೆ ಎಷ್ಟೋ ಸಿನಿಮಾಗಳನ್ನು ನಾವಾಗ ನೋಡಿದೆವು. ನಾನು ಮೊದಲು ನೋಡಿದ ಸಿನಿಮಾನೇ 'ಹುಲಿಯ ಹಾಲಿನ ಮೇವು' ಆ ನೆನಪು ಇನ್ನೂ ಹಸಿರಾಗಿದೆ. ನಮ್ಮವ್ವನನ್ನು ಕಾಡಿಸಿ ರಮಿಸಿ ಹುಲಿಯ ಹಾಲಿನ ಮೇವು ಸಿನಿಮಾ ನೋಡಲು ಕರೆದುಕೊಂಡು ಹೋಗಿದ್ದೆವು.

ಸಿನಿಮಾವೇನೋ ಆರಂಭವಾಯಿತು ಆದರೆ ಒಂದು ದೃಶ್ಯದಲ್ಲಿ ರಾಜ್‌ಕುಮಾರ್ ಹುಲಿಯ ಜತೆಗೆ ಫೈಟಿಂಗ್ ಮಾಡುವಂತಹ ಸಂದರ್ಭ. ಹುಲಿ ರಾಜ್‌ಕುಮಾರನ ಮೇಲೆ ಎರಗಿ ಬರುತ್ತದೆ. ನಮ್ಮವ್ವ ತನ್ನ ಮೇಲೆಯೇ ಹುಲಿ ಎಗರಿ ಬಂದಂತೆ ಭಾವಿಸಿ, ಕೂಗಿಕೊಂಡು ತನ್ನೆರಡೂ ಕಣ್ಣುಗಳನ್ನು ಮುಚ್ಚಿ ಹಿಂದಕ್ಕೆ ತಿರುಗಿ ಬಿಡುವುದೆ. ನಾನೊಲ್ಲೇ ಯಪ್ಪಾ, ಸಿನಿಮಾ ವಲ್ಲ್ಯ, ನೋಡಲ್ಲಿ ನಮ್ಮ ಮೇಲಿನೇ ಹುಲಿ ಬರ್ತಾ ಇದೆ. ನನ್ನ ಈ ಮಗನ ಗತಿಯೇನು? ನನ್ನೂರಿಗೆ ಹೋಗ್ತೀನಿ ಬಿಡಿ ಅಂತ ಒಂದೇ ಸವನೆ ಮಗು ರೊಚ್ಚು ಹಿಡಿದಂತೆ ಕಾಡಹತ್ತಿದಳು. ಮಕ್ಕಳಾದ ನಮಗೋ ರಾಜ್‌ಕುಮಾರ್ ಹುಲಿಯನ್ನ ಪಳಗಿಸಿ ಹುಲಿಯ ಜೊತೆ ಫೈಟಿಂಗ್ ಆಡುವ, ಹುಲಿಯ ಹಾಲನ್ನೇ ಕುಡಿಯುವ ದೃಶ್ಯವನ್ನು ಕಣ್ತುಂಬಿಕೊಳ್ಳಬೇಕು ಎಂಬುವ ತುಡಿತ.

ಇತ್ತ ನನ್ನವ್ವನ ಪಾಡು ಹೇಳತೀರದು ಕೊನೆಗೂ ಗಟ್ಟಿಯಾಗಿ ಆಕೆಯ ಕೈ ಹಿಡಿದುಕೊಂಡು ಆ ಸಿನಿಮಾ ನೋಡಲು ಶುರು ಮಾಡಿದೆವು. ಇದು ಈಗಲೂ ಕಣ್ಮುಂದೆ ಕಟ್ಟಿದಂತಿದೆ. ತಲೆ ತುಂಬಾ ಸೆರಗು ಹೊದ್ದುಕೊಂಡು ನನ್ನವ್ವ ಆ ಸೆರಗಿನ ಚುಂಗಿನಲ್ಲಿ ಎರಡೂ ಕಣ್ಣುಗಳನ್ನು ಒತ್ತಿಕೊಂಡು, ಅದೇಗೆ ಎರಡು, ಎರಡೂವರೆ ತಾಸಿನ ಸಿನಿಮಾ ನೋಡಿದಳೋ